**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 873/2025**

**ಸಿ.ಡಬ್ಲ್ಯೂಃ 4, ಪಿ.ಡಬ್ಲ್ಯೂಃ 3**

ಸಾಕ್ಷಿದಾರರ ಹೆಸರು : ಈಶ್ವರ

ತಂದೆಯ ಹೆಸರು : ನಾಗಪ್ಪ ನಾಯ್ಕ

ವಯಸ್ಸು : 38 ವರ್ಷ

ಉದ್ಯೋಗ : ಅಂಗಡಿ

ವಾಸ್ತವ್ಯ : ಬೆಳ್ನಿ, ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 11/12/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 16.10.2024 ರಂದು ಪೊಲೀಸರು 1.00 ರಿಂದ 2.00 ಗಂಟೆಯವರೆಗೆ ಪಂಚನಾಮೆ ಮಾಡಿದ್ದು ಪಂಚನಾಮೆಗೆ ನಾನು ಮುಂಡಳ್ಳಿಗೆ ಹೋಗಿರುತ್ತೇನೆ. ಕತ್ತಿಯನ್ನು ಪೊಲೀಸರು ಜಪ್ತು ಮಾಡಿರುತ್ತಾರೆ. ನಾನು ಪಂಚನಾಮೆ ಮೇಲೆ ಸಹಿ ಮಾಡಿರುತ್ತೇನೆ.

2. ಸಾಕ್ಷಿಯು ಜಪ್ತು ಪಂಚನಾೆಮ ನೋಡಿ ಗುರುತಿಸಿದ್ದು ಅದನ್ನು ನಿಪಿ- 4 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 4 ಎ ಎಂದು ಗುರುತಿಸಲಾಯಿತು. ಸಾಕ್ಷಿಯ ಕತ್ತಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ವಿ ಎಫ್ ಜಿ ವಕೀಲರಿಂದ,**

ನಾನು ಬೆಳ್ನಿಯಲ್ಲಿ ವಾಸವಾಗಿದ್ದೇನೆ. ಪಂಚನಾಮೆ ಮಾಡಿದ ಸ್ಥಳದಿಂದ ನನ್ನ ಮನೆ ಸುಮಾರು 6 ಕಿಮಿ ದೂರದಲ್ಲಿ ಇದೆ. ನನಗೆ ಪಂಚನಾಮೆಗೆ ಪೊಲೀಸರು ಕರೆದಿದ್ದರು. ಪಂಚನಾಮೆಗೆ ನನಗೆ ನೊಟೀಸನ್ನು ನೀಡಿಲ್ಲಾ. ಪಂಚನಾಮೆಯನ್ನು ಯಾರು ಬರೆದರೆಂದು ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಕೈ ಯಿಂದ ಬರೆದಿದ್ದಾರೆ. ಪಂಚನಾಮೆಗೆ ಸಹಿಯನ್ನು ಗುನ್ಹಾ ಸ್ಥಳದಲ್ಲಿ ಹಾಕಿರುತ್ತೇನೆ. ಕೈ ಯಿಂದ ಬರೆದ ಪಂಚನಾಮೆಯನ್ನು ಇಂದು ನ್ಯಾಯಾಲಯದಲ್ಲಿ ನನಗೆ ತೋರಿಸಿರುವುದಿಲ್ಲ. ಕತ್ತಿಗೆ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿಲ್ಲ. ಸದರಿ ಕತ್ತಿಗೆ ರಕ್ತದ ಕಲೆ ಇರಲಿಲ್ಲ. ನಾನು ಹೇಳುವಂತೆ ಗುನ್ಹಾ ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿ ಕತ್ತಿಯನ್ನು

ವಶಕ್ಕೆ ಪಡೆದಿಲ್ಲಾ ಎಂದರೆ ಸರಿಯಲ್ಲ. ಪೊಲೀಸರು ಠಾಣೆಯಲ್ಲಿ ತಯಾರಿಸಿದ ಪಂಚನಾಮೆಗೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಕೈ ಬರಹದ ಪಂಚನಾಮೆಗೆ ಸಹಿ ಮಾಡಿದ್ದೇ ಇಲ್ಲಾ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**